೬. ಛಲಮನೆ ಮೆರೆವೆಂ –ರನ್ನ (ಪದ್ಯದ ಹೊಸಗನ್ನಡ ರೂಪ)

ಪೀಠಿಕೆ

ಮಹಾಭಾರತ ಯುದ್ಧದಲ್ಲಿ ತನ್ನೆಲ್ಲ ಸಹೋದರರರನ್ನೂ ,ಆಪ್ತಮಿತ್ರ ಕರ್ಣನನ್ನೂ ಕಳೆದುಕೊಂಡ ದುರ್ಯೋಧನನನು ತನ್ನ ತಂದೆ ತಾಯಿಯರ ಅಪೇಕ್ಷೆಯಂತೆ ರಣರಂಗದಲ್ಲಿ ಶರಶಯ್ಯೆಯಲ್ಲಿ ಮಲಗಿದ್ದ ತಾತ ಭೀಷ್ಮರ ಸಲಹೆಯನ್ನು ಪಡೆಯಲು ಬರುತ್ತಾನೆ. ಭೀಷ್ಮರು ಯದ್ಧವನ್ನು ನಿಲ್ಲಿಸಿ ಪಾಂಡವರೊಡನೆ ಸಂಧಿ ಮಾಡಿಕೊಂಡು ಬದುಕಬೇಕೆಂಬ ಸಲಹೆಯನ್ನು ದುರ್ಯೋಧನನಿಗೆ ನೀಡುತ್ತಾರೆ. ಆದರೆ ಅದಕ್ಕೊಪ್ಪದ ದುರ್ಯೋಧನ ತಾನು ಯುದ್ಧ ಮಾಡುವುದಾಗಿ ತಿಳಿಸುತ್ತಾನೆ. ಈ ಸಂದರ್ಭದಲ್ಲಿ ಭೀಷ್ಮರೊಂದಿಗೆ ಮಾತನಾಡುವಾಗ ವ್ಯಕ್ತವಾಗುವ ದುರ್ಯೋಧನನ ಛಲದ ಗುಣ ,ಅವನ ನಿರ್ಧಾರ , ಅವನ ಅಭಿಮಾನದ ಮಾತುಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ .

ವಚನ : ಇಂಬುಕೆಯ್ವಿಯಪ್ಪೊಡೆ ಪಾಂಡವರನೊಡಂಬಡಿಸಿ ಸಂಧಿಯಂ ಮಾಡಿ ಪೂರ್ವಕ್ರಮದೊಳ್ ನಡೆವಂತು ಮಾಳ್ಪೆಂ ಇನ್ನುಮವರೆಮ್ಮಂದುದಂ ಇಂಬುಕೆಯ್ಯದವರ್ ಮೀರಿವರಲ್ಲ ನೀನುಮೆಮ್ಮ ಪೇಳ್ದುದಂ ಮೀರದೆ ನೆಗಳಲ್ವೇಳ್ಕುಮೆನೆ ಸುಯೋಧನಂ ಮುಗುಳ್ನಗೆ ನಕ್ಕು -

ಅರ್ಥ

ಒಪ್ಪುವೆಯಾದರೆ ಪಾಂಡವರನ್ನು ಒಡಂಬಡಿಸಿ ಒಪ್ಪಂದ ಮಾಡಿ ಮೊದಲಿನಂತೆ ಕೂಡಿ ನಡೆಯುವ ಹಾಗೆ ಮಾಡುವೆನು . ಈಗಲಾದರೂ ಅವರು ನಮ್ಮ ಮಾತನ್ನು ಕೇಳುತ್ತಾರೆ. ಮೀರುವವರಲ್ಲ. ನೀನೂ ಕೂಡ ನಮ್ಮ ಮಾತನ್ನು ಮೀರದೆ ನಡೆದುಕೊ '' ಹೀಗೆ ನುಡಿಯಲಾಗಿ (ಎಂದು ಭೀಷ್ಮರು ಹೇಳಿದಾಗ) ದುರ್ಯೋಧನನು ಮುಗುಳ್ನಕ್ಕು _

ಕಂ || ನಿಮಗೆ ಪೊಡೆಮಟ್ಟು ಪೋಪೀ |
ಸಮಕಟ್ಟಿ ಬಂದೆನಹಿತರೊಳ್ ಸಂಧಿಯನೇಂ ||
ಸಮಕೊಳಿಸಲೆಂದು ಬಂದೆನೆ |
ಸಮರದೊಳೆನಗಜ್ಜ ಪೇಳಿಮಾವುದು ಕಜ್ಜಂ ||

ಅರ್ಥ

ನಿಮಗೆ ನಮಸ್ಕಾರ ಮಾಡಿ ಹೋಗಬೇಕೆಂದು ಬಂದೆನಲ್ಲದೆ ಶತ್ರುಗಳೊಡನೆ ಒಪ್ಪಂದವನ್ನು ಏರ್ಪಡಿಸಲೆಂದೇನು ನಾನು ಬಂದೆನೆ ? ಅಜ್ಜಾ , ಯುದ್ಧದಲ್ಲಿ ಇನ್ನು ನನ್ನ ಕಾರ್ಯವೇನೆಂಬುದನ್ನು ಹೇಳಿ .

ಕಂ || ನೆಲಕಿರಿವೆನೆಂದು ಬಗೆದಿರೆ |
ಚಲಕಿರಿವೆಂ ಪಾಂಡುಸುತರೊಳೀನೆಲನಿದು ಪಾ||
ಳ್ನಿಲನೆನಗೆ ದಿನಪಸುತನಂ |
ಕೊಲಿಸಿದ ನೆಲನೊಡನೆ ಮತ್ತೆ ಪುದುವಾಳ್ದಪೆನೇ ||

ಅರ್ಥ

ನಾನೇನು ಭೂಮಿಗಾಗಿ ಹೋರಾಡುವೆನೆಂದು ಭಾವಿಸಿದಿರಾ ? ನನ್ನ ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಹಾಳು ಭೂಮಿ . ಕರ್ಣನನ್ನು ಕೊಲಿಸಿದ ಭೂಮಿಯೊಡನೆ ಮತ್ತೆ ನಾನು ಬಾಳುವುದುಂಟೆ ?

ಉ|| ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದ ಪಾರ್ಥಭೀಮರು |
ಳನ್ನೆಗಮೊಲ್ಲೆನೆನ್ನೊಡಲೊಳೆನ್ನಸುವುಳ್ಳಿನಮಜ್ಜ ಸಂಧಿಯಂ ||
ಮುನ್ನಮವಂದಿರಿರ್ಬರುಮನಿಕ್ಕುವೆನಿಕ್ಕಿ ಬಳಿಕ್ಕೆ ಸಂಧಿಗೆ |
ಯೊವ್ವನ್ನೆಗಳ್ದಂತಕಾತ್ಮಜನೊಳೆನ್ನಳಲಾರಿದೊಡಾಗದೆಂಬೆನೇ ||

ಅರ್ಥ

ನನ್ನ ಪ್ರೀತಿಯ ಬಂಟ (ಕರ್ಣ) ನನ್ನೂ , ನನ್ನ ಪ್ರೇಮದ ತಮ್ಮ (ದುಶ್ಶಾಸನ)ನನ್ನೂ ಕೊಂದ ಅರ್ಜುನ ಭೀಮರು ಜೀವಂತವಾಗಿರುವವರೆಗೆ ನನ್ನ ದೇಹದಲ್ಲಿ ಪ್ರಾಣವಿರುವವರೆಗೂ , ಅಜ್ಜಾ , ನಾನು ಸಂಧಿಗೆ ಒಪ್ಪಲಾರೆನು . ಮೊದಲು ಆ ಇಬ್ಬರನ್ನೂ ಕೊಲ್ಲುವೆನು . ಹಾಗೆ ಕೊಂದ ಬಳಿಕ ಧರ್ಮರಾಜನೊಡನೆ ಸಂಧಿ ಮಾಡಿಕೊಳ್ಳೋಣ . ನನ್ನ ದುಃಖ ಆರಿದ ಮೇಲೆ ಅದು ಬೇಡವೆನ್ನುವೆನೆ ?

ಕಂ|| ಪುಟ್ಟಿದ ನೂರ್ವರುಮೆನ್ನೊಡ|
ವುಟ್ಟಿದ ನೂರ್ವರುಮಿದಿರ್ಚಿ ಸತ್ತೊಡೆ ಕೋಪಂ ||
ಪುಟ್ಟಿ ಪೊದಳ್ದುದು ಸತ್ತರ್ |
ಪುಟ್ಟರೆ ಪಾಂಡವರೊಳಿರಿದು ಛಲಮನೆ ಮೆರೆವೆಂ ||

ಅರ್ಥ

ಹುಟ್ಟಿದ ನೂರ್ವರು ಮಕ್ಕಳೂ ,ನನ್ನೊಡನೆ ಹುಟ್ಟಿದ ನೂರ್ವರು ಸೋದರರೂ ಶತ್ರುಗಳನ್ನು ಎದುರಿಸಿ ಸತ್ತರು . ಅದರಿಂದ ನನ್ನಲ್ಲಿ ಕೋಪ ಕೆರಳಿ ಅತಿಶಯವಾಯಿತು. ಸತ್ತವರೇನು ಮರಳಿ ಹುಟ್ಟುವುದಿಲ್ಲವೆ ? ಪಾಂಡವರೊಡನೆ ಕಾದಾಡಿ ನನ್ನ ಛಲವನ್ನೆ ಸಾಧಿಸುವೆನು .

ಕಂ || ಕಾದದಿರೆನಜ್ಜ ಪಾಂಡವ |
ರಾದರ್ ಮೇಣಿಂದಿನೊಂದೆ ಸಮರದೊಳಾಂ ಮೇ ||
ಣಾದೆನದರಿಂದೆ ಪಾಂಡವ
ರ್ಗಾದುದು ಮೇಣಾಯ್ತು ಕೌರವಂಗವನಿತಳಂ ||

ಅರ್ಥ

ಅಜ್ಜಾ, ನಾನು ಕಾದಾಡದೆ ಬಿಡಲಾರೆ . ಇಂದಿನ ಒಂದು ಕಾಳಗದಲ್ಲಿ ಪಾಂಡವರು ಉಳಿಯಬೇಕು , ಇಲ್ಲವೆ ನಾನು ಉಳಿಯಬೇಕು . ಅದರಿಂದ ಭೂಮಿಯ ಒಡೆತನ ಪಾಂಡವರಿಗೆ ಹೋಗಬೇಕು ಇಲ್ಲವೆ ಕೌರವನಿಗೆ ಉಳಿಯಬೇಕು . ಎಂದು ದೊರ್ಯೋಧನನು ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮರಿಗೆ ಹೇಳಿದನು.

ಆಧಾರ : ಸಾಹಸಭೀಮ ವಿಜಯಂ ಗದ್ಯಾನುವಾದ ಆರ್ . ವಿ. ಕುಲಕರ್ಣಿ